from you to raise this matter. ಶ್ರೀಮತಿ ನಾಗವ್ವ ಎಂಬ ಒಬ್ಬ ಹೆಂಗಸು ತಮಗೆ ಈ ಬಗ್ಗೆ ಒಂದು ಕಾಗದವನ್ನು ಬರೆದು ತಮ್ಮನ್ನೂ ಸಹ ಕೇಳಿ ಕೊಂಡಿದ್ದಾರೆ. She has given the entire history. ಅದಕ್ಕಾಗಿ ಸರ್ಕಾರದವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ಕೊಡುವುದಕ್ಕೆ ತಾವು ಅನುಮತಿ ಕೊಡಬೇಕು. ಭೀಕರವಾದ ಕೊಲೆಯಾಗಿದೆ. ಮಂತ್ರಿಗಳ ಮೇಲೂ ಸಹ ಒಂದು ಧೀರ್ಘವಾದ ದೂರು ಬಂದಿದೆ. ಶ್ರೀ ನಾಗಪ್ಪ ಬಸಪ್ಪ ಎನ್ನುವವರು ಒಂದು ದೂರು ಕೊಟ್ಟಿದ್ದಾರೆ. ಅವರು ಅದನ್ನು ಈ ಕಾಗದದಲ್ಲಿ ಎನ್‌ಕ್ಲೋಜ್ ಮಾಡಿದ್ದಾರೆ. He has filed it before the Judicial Magistrate. It is attrocious: That is why I wanted a statement to be made in the House. The letter was given to you on the 24th August.

MADAM SPEAKER:— There are rules to be observed. ಮಾನ್ಯ ಸದಸ್ಯರಿಂದ ನೋಟೀಸ್ ಈಗ ಬಂದಿದೆ, ಯಾರೂ ಇದಕ್ಕೆ ಇದುವರೆಗೆ ಅನುಮತಿ ಕೇಳಲಿಲ್ಲ. ಅಂದ ಮೇಲೆ ತಾವು ಅಂತ, ಕಂತೆ, ಅದಂತೆ ಇದಂತೆ ಎಂದು ಇಲ್ಲಿ ಈಗ ಹೇಳಿದರೆ ಹೇಗೆ? ತಮ್ಮ ನೋಟೀಸ್ ಈಗ ಬಂದಿದೆ. ನಾನು 11-30 ಗಂಟೆಯಿಂದಲೂ ಆಫೀಸಿನಲ್ಲಿ ಇದ್ದೇನೆ. ನನಗೆ ಅಲ್ಲಿಯವರೆಗೂ ತಮ್ಮ ನೋಟೀಸ್ ಬರಲಿಲ್ಲ. ತಾವು ಕಳುಹಿಸಿದಂಥ ನೋಟೀಸ್ ಈಗ ನನಗೆ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್; 24-8-1973ರಂದು ಶ್ರೀಮತಿ ನಾಗಮ್ಮ ಎಂಬುವರು ತಮಗೆ ಒಂದು ಅರ್ಜಿಯನ್ನು ಇದರ ಬಗ್ಗೆ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ; ಕಾಳಿನದಿ ಯೋಜನೆಯ ಗುತ್ತಿಗೆದಾರರಾದ ಥಾಪರ್ ಕಂಪನಿಯಲ್ಲಿ ಕೆಲಸಮಾಡುತ್ತಿರುವ ನೌಕರರ ಮೇಲೆ ಪೋಲೀಸರ ದೌರ್ಜನ್ಯದ ಬಗ್ಗೆ ನಾನು ಒಂದು ನೋಟೀಸ್ ದಾಂಢೇಲಿಯಿಂದ ಕಳುಹಿಸಿದ್ದೇನೆ. ಅದರ ಬಗ್ಗೆ ಏನಾಯಿತು?

ಅಧ್ಯಕ್ಷರು; ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅವರಿಂದ ಸ್ಟೇಟ್‌ಮೆಂಟ್ ಬಂದ ಮೇಲೆ ಅದನ್ನು ಅಜೆಂಡಾದಲ್ಲಿ ಸೇರಿಸಲಾಗುತ್ತದೆ.

PROVIDING OCCASION TO DISCUSS THE CIRCUMSTANCES OF DEATH OF A M. P. C. C. MEMBER.

*ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ); ಮಾನ್ಯ ಅಧ್ಯಕ್ಷರೇ, ಮೊನ್ನೆ ಬುಧವಾರದ ದಿವಸ ಈ ಸದನದ ಮುಂದೆ ಎಂ. ಪಿ, ಸಿ. ಸಿ. ಸದಸ್ಯರಾದಂಥ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಮಾನ್ಯ ಶ್ರೀ ವಿದ್ಯಾಧರ ಅವರ ನಿಧನದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಲು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದಾಗ, ನಮ್ಮ ಭಾವನೆಗಳು ಏನೆಂಬುದನ್ನು ತಮ್ಮ ಮುಂದೆ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ ಹಾಗೂ ನಮ್ಮ ಕರ್ತವ್ಯವಾಗಿತ್ತು. ಆದರೆ ತಾವು ಆ ಒಂದು ನಿಲುವಳಿ ಸೂಚನೆಯ ಮೇಲೆ ಏನೂ ಮಾತನಾಡಬೇಡಿ ಎಂದು ಹೇಳಿ ತಮ್ಮ ಒಂದು ಅನಮ್ಮತಿಯನ್ನು ಸೂಚಿಸಿದಿರಿ. ಅದಕ್ಕಾಗಿ ಅಂದು ಆ ರೀತಿಯಾದ ಘಟನೆ ನಡೆಯಿತೆಂಬುದು ತಮಗೆ ಗೊತ್ತಿದೆ. ನಾವು ತಮ್ಮ ಮನವೊಲಿಸಲು ಎಷ್ಟೇ ಪ್ರಯತ್ನಪಟ್ಟರೂ, ಅದನ್ನು ಬೇರೆ ಒಂದು ರೂಪದಲ್ಲಿ ಈ ಸದನದ ಮುಂದೆ ತಂದು ಅದರ ಬಗ್ಗೆ ಪೂರ್ಣವಾಗಿ ಚರ್ಚೆಮಾಡಬೇಕೆಂಬುದು ವಿರೋಧ ಪಕ್ಷದವರೆಲ್ಲರ ಆಶಯವಾಗಿತ್ತು. ತಮ್ಮನ್ನು ಬೇಟಿ ಮಾಡಿದ ಕಾಲದಲ್ಲಿ ಈಗ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಬೇಡಿ. ಅದನ್ನು ಮುಂದೆ ನೋಡೋಣ, ಬೇರೆ ಅವಕಾಶವನ್ನು ಮಾಡಿಕೊಡುತ್ತೇನೆಂದು ತಾವು ಹೇಳಿದ್ದೀರಿ. ಆ ಒಂದು ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ಈಗಾಗಲೇ ಅನೇಕ ಮನವಿಗಳನ್ನು ಕೊಟ್ಟಿದ್ದಾರೆ. ಈ ಸಭೆಯಲ್ಲಿ ಇದು ಸಂಪೂರ್ಣವಾಗಿ ಚರ್ಚೆಯಾಗಬೇಕು. ಈ ಅಧಿವೇಶನ ಮುಗಿಯುವುದರೊಳಗೆ ಇನ್ನು ಯಾವತ್ತಾದರೂ ಒಂದು ದಿವಸ ಇಲ್ಲಿ ಇದು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಈ ದಿವಸಕ್ಕೆ ಆ ದಿವಸ ನಡೆದ ಘಟನೆಯನ್ನು ಯಾರೂ ಮುಂದುವರಿಸಬಾರದೆಂದು ನಾನು ನನ್ನ ಸ್ನೇಹಿತರಾದಂಥ ವಿರೋಧ ಪಕ್ಷದ ಸ್ನೇಹಿತರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ಈ ಮಧ್ಯೆ, ತಾವು ಮತ್ತೊಮ್ಮೆ ಇದರ ಬಗ್ಗೆ ಸಾಕಾದಷ್ಟು ಮಾಹಿತಿಯನ್ನು ಸಂಗ್ರಹಿಸಿಕೊಂಡು ತಾವೇ ಇದನ್ನು ಚರ್ಚೆಮಾಡಲು ಒಂದು ದಿನಸವನ್ನು ನಿಗದಿಮಾಡಿ ನಾವು ಇಲ್ಲಿ ಅದನ್ನು ಚರ್ಚೆಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :—ಅದಕ್ಕಾಗಿ ತಮಗೆ ಬಹಳ ವಂದನೆಗಳು. ಈ ವಿಚಾರವನ್ನು ಇವತ್ತು ಮುಂದುವರಿಸಬಾರದೆಂದು ತಮ್ಮ ಸ್ನೇಹಿತರನ್ನು ಕೇಳಿದ್ದಕ್ಕೆ ವಂದನೆಗಳು. ನನಗೆ ಈಗಾಗಲೇ ಇದರ ಬಗ್ಗೆ ಬೇಕಾದಷ್ಟು ನೋಟೀಸುಗಳು ಬಂದಿವೆ.

RESCENDING SUCPENSION ORDER OF SIXTEEN MEMBERS

ಶ್ರೀ ಎಂ ಎಸ್. ಕೃಷ್ಣನ್ : ಮೊನ್ನೆ ನಡೆದಂಥ ಘಟನೆಯ ಬಗ್ಗೆ ಕೆಲವು ಸದಸ್ಯರನ್ನು ಆ ದಿನದ ಮಟ್ಟಿಗೆ ಸಸ್‌ಪೆಂಡ್ ಮಾಡಿದ್ದಾರೆಂದು ತಿಳಿದುಬಂತು. ಅದನ್ನು ತಾವು ರೆಸಿಂಡ್ ಮಾಡುವುದಕ್ಕೆ ಸಾಧ್ಯವಿದೆ. ಅದು ತಮಗೆ ಸ್ವಲ್ಪ ಪುಟ್ಟಿಗೆ ಕಷ್ಟವಾಗಬಹುದು. ಆದರೂ ತಾವು ಆದನ್ನು ಕನ್‌ಸೀಡರ್ ಮಾಡ

ಬೇಕಾಗಿದೆ. ಇವತ್ತಿನದಿವಸ ಮಾನ್ಯ ವಿರೋಧಪಕ್ಷದ ನಾಯಕರು ಆ ವಿಚಾರವನ್ನು ಇನ್ನೂ ಉಲ್ಬಣ ಸ್ಥಿತಿಯಲ್ಲಿ ತೆಗೆದುಕೊಂಡು ಹೋಗಬಾರದು. ಅದನ್ನು ಬೇರೆ ರೀತಿಯಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡುತ್ತೀರೆಂದು ಅಶ್ವಾಸನೆಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು :— ನಾನು ಹೇಳಿದೇ ಇರುವುದನ್ನೆಲ್ಲಾ ನಾನು ಹೇಳಿಡೆ ಎಂದು ಹೇಳಬಾರದು. ನನಗೆ ಇಲ್ಲಿ ಕೆಲವು ನೋಟೀಸುಗಳು ಬಂದಿವೆ. ರೂಲ್ 59 ರ ಪ್ರಕಾರ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೆ.

ಶ್ರೀ ಎಂ. ಎಸ್ ಕೃಷ್ಣನ್ : ರೂಲ್ 59ರ ಪ್ರಕಾರ ಅದನ್ನು ಅಲ್ಲಿ ಚರ್ಚೆ ಮಾಡಬೇಕೆಂದು ನಾನು ತಮಗೆ ನೋಟಿಸ್ ಕೊಟ್ಟಿದ್ದು.

MR. SPEAKER.—I have said that I will just consider. That is all what I have said.

ಶ್ರೀ ಎಂ. ಎಸ್. ಕೃಷ್ಣನ್ : ರೂಲ್ 59ರ ಪ್ರಕಾರ ಇದನ್ನು ಚರ್ಚೆ ಮಾಡಬೇಕಾಗಿದೆ. You may agree or not agree. That is a different matter. If you agree, what will be the position is another matter. Since the opposition wants to create an atmosphere where there is peace, calmness, so that this House can function in a proper manner, I want to know whether the Chair can reconsider the action already taken.

MADAM SPEAKER.—They have regretted for it. They say it was not their intention to go against the Speaker. Let us leave it at that.

NON-PAYMENT OF SALARIES TO PRIMARY SCHOOL TEACHERS IN THE STATE

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).— ಮೈಸೂರು ರಾಜ್ಯದಲ್ಲಿರ ತಕ್ಕ ಪ್ರಾಥಮಿಕ ಉಪಾಧ್ಯಾಯರಲ್ಲಿ ಸುಮಾರು ಒಂದು ಲಕ್ಷ ಉಪಾಧ್ಯಾಯರಿಗೆ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಸಂಬಳವಿಲ್ಲ, ಇದರ ಬಗ್ಗೆ ಕೆಲವರು ಎಲ್ಲಿ ಹೋಗಿ ರಿಪ್ರೆಸೆಂಟ್ ಮಾಡಬೇಕು ಎಂಬುದಾಗಿ ಕೇಳುತ್ತಿದ್ದಾರೆ. ನಾವುಗಳಿಕೆವಾಗಿ ಅವರನ್ನು ವರ್ಗಾವಣೆ ಮಾಡಿದಮೇಲೆ ಅವರು ಯಾವ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕೋರ್ಟಿಗೆ ಹೋಗಬೇಕು, ಹೈಕೋರ್ಟಿಗೆ ಹೋಗಬೇಕೋ ಅಥವಾ ಸುಪ್ರೀಂ ಕೋರ್ಟಿಗೆ ಹೋಗಬೇಕೋ ಎಂದು ಕೇಳುತ್ತಿದ್ದಾರೆ. ಅವರೆಲ್ಲರೂ ಈಗ ಬಹಳ ತೊಂದರೆಯಲ್ಲಿರುವುದರಿಂದ ಅನೇಕರು ಈಗಾಗಲೇ ಕೋರ್ಟಿಗೆ ಹೋಗಬೇಕಾಗಿ ಬಂತು. ಕೋರ್ಟಿನಲ್ಲಿ ಉಪಾಧ್ಯಾಯರ ಪರ ತೀರ್ಮಾನವಾಗಿದ್ದರೂ, ಸುಪ್ರೀಂ ಕೋರ್ಟಿನಲ್ಲಿ ಇದರ ಬಗ್ಗೆ ಸ್ಪೆ ಪೆಕೇಟ್ ಆಗಿದ್ದರೂ ಸಹ ಸರ್ಕಾರ ಇದರ ಬಗ್ಗೆ ಗಮನ ಕೊಡದೆ ಇರುವುದರಿಂದ ಅನೇಕ ಜನ ಉಪಾಧ್ಯಾಯರು ವರ್ಗವಾಗಿದ್ದಾರೆ. ಅವರಿಗೆ ಅಲ್ಲಿ ಸರಿಯಾದ ಸ್ಥಳವಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ಈ ಸಭೆಯಲ್ಲಿ ತಿಳಿಸಬೇಕು.

ಅಧ್ಯಕ್ಷರು :— ಮಾನ್ಯ ಶ್ರೀ ಕೃಷ್ಣಪ್ಪನವರು ಇದರ ಬಗ್ಗೆ ಒಂದು ನೋಟೀಸನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣಿಸಿ ಅದರ ಬಗ್ಗೆ ಉತ್ತರವನ್ನು ಜಾಗ್ರತೆಯ್ಯಾಗಿ ಕಳುಹಿಸಬೇಕೆಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಇದು ಬಡ ಜನರ ವಿಷಯ. ಅಭಾವ ಕಾಲದಲ್ಲಿ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಅವರಿಗೆ ಸಂಬಳ ವಿಲ್ಲದಿದ್ದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚಿಸಬೇಕು.

ಅಧ್ಯಕ್ಷರು : ಹೇಳಿದ್ದನ್ನೇ ಹೇಳುವುದು ಸರಿಯಲ್ಲ

ಶ್ರೀ ಬಿ. ಪುಟ್ಟಸ್ವಾಮಯ್ಯ : ಅವರು ಬಹಳ ಬಡವರು. ಮನೆಯಲ್ಲ ಅವರಿಗೆ ರೇಷನ್ ಸಹ ಸಿಗದೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಈ ಕಾಲದಲ್ಲಿ ರೇಷನ್ನಿಗೆ ಎಲ್ಲರಿಗೂ ಕಷ್ಟ ಇದೆ.

OPERATION OF RELIEF MEASURES IN DROUGHT HIT AREAS

ಶ್ರೀ ಬಾಪುಗೌಡ ರಾಮಪ್ಪ.—ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕ್ಷಾಮಪೀಡಿತ ಪ್ರದೇಶಗಳಲ್ಲಿ ರಿಲೀಫ ಕಾಮಗಾರಿಗಳು ನಿಂತು ಹೋಗಿವೆ. ಇದರಿಂದಾಗಿ ಸುಮಾರು ಒಂದು ಸಾವಿರ ಜನ ಗ್ರಾಜುಯೇಟ್ಸ್, ಇಂಜನಿಯರ್‌ಗಳು ಮತ್ತು ಡಿಪ್ಲೋಮಾ ಹೋಲ್ಡರುಗಳು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಈ ಬಗ್ಗೆ ನಾನು ಒಂದು ನೋಟಿಸನ್ನು ತಮಗೆ ಕಳುಹಿಸಿದ್ದೆ.

ಅಧ್ಯಕ್ಷರು : ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅದಕ್ಕೆ ಸರ್ಕಾರದವರು ಜವಾಬ್ದು ಕೊಡುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ : ನಾನು ನಮ್ಮ ಹಾಸನ ಟೌನ್ ಪಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು : ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣನೆ ಮಾಡಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳುತ್ತೇನೆ.

RATION SUPPLY THROUGH THE JANATA BAZARS IN BANGALORE

ಶ್ರೀ ಎಂ. ಎನ್. ಕೃಷ್ಣನ್ : ಬೆಂಗಳೂರು ನಗರದಲ್ಲಿನ ಆಹಾರ ಧಾನ್ಯಗಳ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಅದರಲ್ಲಿ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಈಗ 4-5 ಜನತಾ ಬಜಾರಗಳಲ್ಲಿ ಆಹಾರಧಾನ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಎಲ್ಲಾ ಜನಗಳು ಆ ಜನತಾ ಬಜಾರುಗಳಿಗೇ ಬರಬೇಕಾದರೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು : ಆಹಾರ ಖಾತೆಯ ರಾಜ್ಯ ಮಂತ್ರಿಗಳು ಬರಲಿ ಅವರು ಬಂದಮೇಲೆ ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಿಳಿಸಲು ಪ್ರಯತ್ನ ಮಾಡೋಣ.

Statement by the Minister for Agriculture and Forests :— Re : Shortage of fertilisers in the State ;

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ ನಾನು ತಮಗೆ ಗೊಬ್ಬರದ ಬಗ್ಗೆ ಒಂದು ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಈಗ ನಮ್ಮ ಹಾಸನ ಜಿಲ್ಲೆಯಲ್ಲಿ ಬತ್ತದ ಪೈರನ್ನು ನಾಟಿ ಹಾಕುವ ಕಾಲ. ಈಗ ಅಲ್ಲಿನ ರೈತರಿಗೆ ಗೊಬ್ಬರವನ್ನು ಕೊಟ್ಟರೆ ಒಳ್ಳೆಯದು. ಆ ಮೇಲೆ ಅವರಿಗೆ ಗೊಬ್ಬರವನ್ನು ಕೊಟ್ಟರೆ ಪ್ರಯೋಜನವಿಲ್ಲ. ಈಗ ಒಂದು ತಿಂಗಳಿಂದ ಹಾಸನ ಜಿಲ್ಲೆಯಲ್ಲಿ ಒಂದು ಕೆ. ಜಿ. ಗೊಬ್ಬರ ಸಿಕ್ಕುತ್ತಿಲ್ಲ. ಅಗ್ರಿಕಲ್ಚರಲ್ ಆಫೀಸು ಮತ್ತು ತಾಲ್ಲೂಕು ಸೊಸೈಟಿಗಳಿಗೆ ರೈತರು ಗೊಬ್ಬರಕ್ಕೆ ಹೋಗಿ ಸಿಕ್ಕದೆ ತಿರುಗಿ ವಾಪಸ್ಸು ಬರುತ್ತಿದ್ದಾರೆ. ರೈತರಿಗೆ ಗೊಬ್ಬರವನ್ನು ಕೊಡದಿದ್ದರೆ ರೈತ ಹೇಗ ವ್ಯವಸಾಯ ಮಾಡಿ ಹೆಚ್ಚು ಉತ್ಪಾದನೆ ಮಾಡಿ ಸಾಲ ಸೋಲಗಳನ್ನು ತೀರಿಸುವುದಕ್ಕೆ ಅವಕಾಶವಾಗುತ್ತದೆ? ಸರ್ಕಾರದವರು ಆ ಕಡೆ ಗಮನ ಕೊಡದಿದ್ದರೆ ರೈತ ಹೀನಸ್ಥಿತಿಗೆ ಬರುತ್ತಾನೆ ಎಂದು ನಾನು ಈ ಕಡೆ ಸರ್ಕಾರದ ಗಮನವನ್ನು

(ಕೆ. ಹೆಚ್. ಹನುಮೇಗೌಡ)

ಸೆಳೆಯುತ್ತಿದ್ದೇನೆ. ಸರ್ಕಾರದವರು ಈ ಕಡೆ ಗಮನ ಕೊಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಕ್ಷಾಮ ಪರಿಸ್ಥಿತಿ ಬರುತ್ತದೆ. ಜನ ಹೊಟ್ಟೆಗಿಲ್ಲದೆ ಸಾಯುತ್ತಾರೆ.

*ಶ್ರೀ ಕೆ. ಹೆಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಗೊಬ್ಬರದ ವಿಷಯವಾಗಿ ಮಾನ್ಯ ಸದಸ್ಯರಾದಿಯಾಗಿ ಎಲ್ಲರೂ ಅನೇಕ ದಿವಸಗಳಿಂದ ಹೇಳುತ್ತಿದ್ದಾರೆ. 1956ನೇ ಇಸವಿಯಿಂದ 1973ನೇ ಇಸವಿಯವರೆಗೆ ಮಾನ್ಯ ಸದಸ್ಯರು ಯಾವುದೇ ವರ್ಷವನ್ನು ಗಮನಕ್ಕೆ ತೆಗೆದುಕೊಂಡರೂ ಸಹ ಮೈಸೂರು ರಾಜ್ಯದಲ್ಲಿ ಗೊಬ್ಬರದ ಪರಿಸ್ಥಿತಿ ಈ ವರ್ಷ ಸರ್ಕಾರದ ಮುಖೇನ ಹಂಚುತ್ತಾ ಇರುವುದು ಹೆಚ್ಚಿದೆ. ಒಂದು ಸಂತೋಷದ ವಿಷಯವೇನೆಂದರೆ ಎಲ್ಲಾ ರೈತರೂ ಸಹ ಗೊಬ್ಬರವನ್ನು ಹಾಕಬೇಕು, ಹೆಚ್ಚು ಬೆಳೆಯಬೇಕು ಎನ್ನುವುದರಲ್ಲಿ ಆಸಕ್ತಿಯನ್ನು ವಹಿಸಿದ್ದಾರೆ. ಸರ್ಕಾರದ ಪ್ರಯತ್ನದ ಸಲುವಾಗಿ ನಮಗೆ ಅಧಿಕ ಗೊಬ್ಬರ ಸಿಕ್ಕಿದೆ. ಅಷ್ಟೇ ಅಲ್ಲ ಉಳಿದ ಯಾವ ರಾಜ್ಯಗಳೊಡನೆ ಪರಿಶೀಲನೆ ಮಾಡಿ ತುಲನೆ ಮಾಡಿ ನೋಡಿದರೂ ಕೂಡ ನಮ್ಮ ರಾಜ್ಯಕ್ಕೆ ಹೆಚ್ಚು ಗೊಬ್ಬರ ಸಿಕ್ಕಿದೆ. ಇವೊತ್ತಿನ ದಿವಸ ನಮಗೆ 71 ಸಾವಿರ ಟನ್ ನೈಟ್ರೋಜನಸ್ ಫರ್ಟಿಲೈಜರ್ ಬೇಕಾಗಿದೆ. ಈಗ ನಮ್ಮ ರಾಜ್ಯಕ್ಕೆ ಫುಲ್ ಮತ್ತು ನಾನ್ ಫುಲ್ ಎರಡೂ ಕೂಡ ನಮ್ಮ ರಾಜ್ಯಕ್ಕೆ ಸಿಕ್ಕಿದೆ. ಇಲ್ಲಿಯವರೆಗೆ 30 ಪರ್ಸೆಂಟ್ ಮಾತ್ರ ನಿಯಂತ್ರಣವಿತ್ತು. ಮೊನ್ನೆ ಅನೇಕ ಖಾಸಗಿ ಕಂಪನಿಯವರ ಜೊತೆಯಲ್ಲಿ ಮಾತನಾಡಿ ಯಾವ ಫರ್ಟಿಲೈಜರ್ ಅದರೂ ಕೂಡ ಸರ್ಕಾರದ ಕಕ್ಷೆಯಲ್ಲಿ ಹಂಚಬೇಕು ಎಂದು ಹೇಳಿದ್ದರಿಂದ ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಫರ್ಟಿಲೈಜರ್ ಪೋಜಿಷನ್ ಹಿಂದಿಗಿಂತ ಹೆಚ್ಚು ಸುಧಾರಣೆಯಾಗುತ್ತದೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಈ ಫರ್ಟಿಲೈಜರ್ ವಿಷಯದಲ್ಲಿ ಬೇರೆ ರಾಜ್ಯಗಳಲ್ಲಿಯೂ ಕೂಡ ತೊಂದರೆ ಇದೆ. ಈಗ ನಮಗೆ ಬೇಕಾದ ಗೊಬ್ಬರದ 1/10 ಭಾಗ ಗೊಬ್ಬರ ನಮಗೆ ದೊರೆಯದೇ ಹೋಗಿರುವಾಗ ಎಲ್ಲರೂ ಎಲ್ಲಾ ಹಂತಗಳಲ್ಲಿಯೂ ನೈಟ್ರೋಜನಸ್ ಫರ್ಟಿಲೈಜರ್ ಉಪಯೋಗ ಮಾಡಬೇಕು ಎನ್ನುವ ಆಸ್ತೆಯನ್ನು ಹೊಂದಿರುವುದರಿಂದ ನಮಗೆ ಈ ವಿಚಾರದಲ್ಲಿ ತೊಂದರೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಎಲ್ಲೆಯೇ ಆಗಲೀ ಯಾವ ಅಧಿಕಾರಿಯೇ ಆಗಲೀ, ಯಾವ ಸಹಕಾರ ಸಂಘದಲ್ಲಿಯೇ ಆಗಲೀ ಈ ಗೊಬ್ಬರದ ಹಂಚಿಕೆಯ ವಿಷಯದಲ್ಲಿ ದುರುಪಯೋಗ ನಡೆದಿದ್ದರೆ, ದುರ್ವರ್ತನೆಯಿಂದ ನಡೆದಿದ್ದರೆ, ಅವಿವೇಕ ಮಾಡಿದ್ದರೆ ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಆ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಾನು ಭರವಸೆ ಕೊಡುತ್ತೇನೆ. ಈಗ ಇದ್ದ ಫರ್ಟಿಲೈಜರನ್ನು ಕೂಡ ಬೇರೆ ಬೇರೆ ಜಿಲ್ಲೆಗಳಲ್ಲಿ ಹಂಚುವುದಕ್ಕೆ ಸಾಗಿಸಿಕೊಂಡು ರೈಲ್ವೆ ತೊಂದರೆ ಇದ್ದರೆ ಬಸ್ಸುಗಳ ಮುಖಾಂತರ ಸಾಗಿಸಿಕೊಂಡು ಹೋಗಿ ಹಂಚಬೇಕು ಎಂದು ನಾನು ಅಧಿಕಾರಿಗಳಿಗೆ

ಸೂಚನೆ ಕೊಟ್ಟಿದ್ದೇನೆ. ಇದರಿಂದಾಗಿ ಎಲ್ಲಾ ಕಡೆಗಳಿಗೂ ಫರ್ಟಿಲೈಜರ್ ತೀವ್ರವಾಗಿ ಮುಟ್ಟುತ್ತದೆ. ಶಾಂತಿಯಿಂದ ವಿತರಣೆಯಾಗುತ್ತಿದೆ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ ; ಈ ಗ್ರೊಬ್ಬರದ ವಿಚಾರದಲ್ಲಿ ಅಂಕಿ ಅಂಶಗಳ ಆಧಾರದ ಮೇಲೆ ನನಗೆ ಒಂದು ಲಿಖಿತ ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ಸುಮ್ಮನೆ ಮೊಗುಂ ಆಗಿ ಹೇಳಿದರೆ ಅದರಿಂದ ಅಷ್ಟು ಪ್ರಯೋಜನವಾಗವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ ; ಮಾನ್ಯ ಸದಸ್ಯರ ಸಮಾಧಾನಕ್ಕೆ ಮಾನ್ಯ ಅಧ್ಯಕ್ಷರು ಒಪ್ಪುವುದಾದರೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಗೊಬ್ಬರವನ್ನು ಹಂಚಿಕೆ ಮಾಡಿದೆ ಎಂಬುವುದನ್ನು, ಅದಕ್ಕೆ ಸಂಬಂಧಪಟ್ಟ ಅಂಕಿ ಸಂಖ್ಯೆಗಳನ್ನು ಈ ದಿವಸ ಸಾಯಂಕಾಲ ಕೊನೆಯ ಹಂತದಲ್ಲಿ ಈ ಸದನದ ಮುಂದೆ ಇಡುತ್ತೇನೆ.

ಶ್ರೀ ಕೆ ಹೆಚ್. ಹನುಮೇಗೌಡ : ಹಾಸನದಲ್ಲಿ ಗೊಬ್ಬರವೇ ಇಲ್ಲ. ಆದ್ದರಿಂದ ಅಲ್ಲಿ ರೈತರಿಗೆ ಅಲ್ಪ ಸಲ್ಪ ಗೊಬ್ಬರವನ್ನು ಕೊಟ್ಟರೆ ಉತ್ತಮವಾಗುತ್ತದೆ. ಈಗ ಹಾಸನ ಜಿಲ್ಲೆಯಲ್ಲಿ ಬತ್ತದ ಪೈರನ್ನು ನಾಟಿ ಹಾಕುತ್ತಿದ್ದಾರೆ ಈಗ ಒಂದು ಎಕರೆಗೆ ಒಂದು ಮೂಟೆಯ ಹಾಗಾದರೂ ಗೊಬ್ಬರವನ್ನು ಕೊಡದಿದ್ದರೆ ಹೇಗೆ ? ಯಾವುದೋ ಟೈಮಿನಲ್ಲಿ ಗೊಬ್ಬರವನ್ನು ಕೊಟ್ಟರೆ ಆದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಅಲ್ಲಿ ನಾಳೆ ದಿವಸ ಗೊಬ್ಬರವನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ : ಈಗಾಗಲೇ ಹಾಸನ ಜಿಲ್ಲೆಗೆ ಎಷ್ಟು ಕೊಟ್ಟಿದೆ ಎಷ್ಟು ಹಂಚಿಕೆ ಮಾಡಿದೆ, ಎಷ್ಟು ಅಲಾಟ್ ಮಾಡಿದೆ ಎಂಬುದನ್ನು ನಾನು ಸ್ಟೇಟ್‌ಮೆಂಟ್ ಕೊಟ್ಟಾಗ ತಮಗೆ ಗೊತ್ತಾಗುತ್ತದೆ. ಹಾಸನ ಜಿಲ್ಲೆಗೆ ಜಾಸ್ತಿ ಕೊಡಬೇಕೆಂದರೆ ಬೇರೆ ಕಡೆಗೆ ಕೊರತೆ ಉಂಟಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ :— ಹಿಂದೆ ರಾಗಿ ಬೆಳೆಗೆ ಗೊಬ್ಬರವನ್ನು ಕೊಟ್ಟಿರಬಹುದು, ಆಲೂಗಡ್ಡೆ ಬೆಳೆಗೆ ಗೊಬ್ಬರವನ್ನು ಕೊಟ್ಟಿರಬಹುದು. ಆದರೆ ಈಗ ಬತ್ತದ ಬೆಳೆ ಬೆಳೆಯುವುದಕ್ಕೆ ಗೊಬ್ಬರವನ್ನು ಕೊಡುವುದು ಬೇಡವೇ ?

ಅಧ್ಯಕ್ಷರು :—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡಲಿ ಆ ಮೇಲೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ —ಗೊಬ್ಬರವನ್ನು ಸಪ್ಲೈ ಮಾಡುವ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಸೀಜನ್ನೇ ಮುಗಿದು ಹೋದ ಮೇಲೆ ಹೇಳಿಕೊಟ್ಟರೆ ಪ್ರಯೋಜನ ಏನು ?

ಅಧ್ಯಕ್ಷರು :—ಇವೊತ್ತು ಸಾಯಂಕಾಲ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ನಂಜೇಗೌಡ :....ಈಗ ಹಾಸನ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ರಾಗಿ ಮತ್ತು ಬತ್ತದ ಪೈರನ್ನು ರೈತರು ನಾಟಿ ಹಾಕುತ್ತಿದ್ದಾರೆ. ಆದ್ದರಿಂದ ಈಗ ಅಲ್ಲಿ ರೈತರಿಗೆ ತುರ್ತಾಗಿ, ಜರೂರಾಗಿ ಗೊಬ್ಬರ ಬೇಕಾಗಿದೆ. ಅಲ್ಲಿ ಕಾಂಪ್ಲೆಕ್ಸ್ ಮಿಕ್ಸ್‌ಚರ್ ಫರ್ಟಿಲೈಜರ್ ಬೇಕಾದಷ್ಟು ಸ್ಟಾಕ್ ಇದೆ. ಆದರೆ ಕಾಂಪ್ಲೆಕ್ಸ್ ಮಿಕ್ಸ್‌ಚರ್ ಫರ್ಟಿಲೈಜರನ್ನು ಕೂಡ ಪರ್ಮಿಟ್ ಮೇಲೆ ಮಾರಾಟ ಮಾಡಬೇಕು ಎಂದು ನಿರ್ಬಂಧವನ್ನು ಹಾಕಿರುವುದರಿಂದ ಸರ್ವೇ ಸಾಮಾನ್ಯ ರೈತರಿಗೆ ಆ ಗೊಬ್ಬರ ಸಿಕ್ಕುತ್ತಿಲ್ಲ. ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಕಾಂಪ್ಲೆಕ್ಸ್ ಮಿಕ್ಸ್‌ಚರ್ ಫರ್ಟಿಲೈಜರನ್ನು ಮಾರಾಟ ಮಾಡತಕ್ಕ ವಿಚಾರದಲ್ಲಿ ಯಾವ ಪರ್ಮಿಟ್ ಬೇಕಾಗಿಲ್ಲ. ಅದನ್ನು ಫ್ರೀಯಾಗಿ ಮಾರಾಟ ಮಾಡಬಹುದು ಎನ್ನುವ ವಿಚಾರದಲ್ಲಿ ಸರ್ಕಾರದವರು ಆದೇಶವನ್ನು ಕೊಟ್ಟರೆ ಈಗ ಗೊಬ್ಬರವನ್ನು ಸ್ಟಾಕು ಏನಿಟ್ಟಿದ್ದಾರೆ ಅದನ್ನು ಮಾರಾಟ ಮಾಡುತ್ತಾರೆ.

MYSORE AGRICULTURAL PRODUCE MARKETING (REGULATION) (AMENDMENT) BILL 1973. INTRODUCTION

SRI SHANKER ALVA (Minister for Co-operation).—Madam, I beg to introduce the Mysore Agricultural Produce Marketing (Regulation) Amendment) Bill, 1973

MADAM SPEAKER.—The Bill is introduced**

MYSORE P. S. C. (CONDUCT OF BUSINESS AND ADDITIONAL FUNCTIONS) 2ND AMENDMENT) BILL, 1973—INTRODUCTION

SRI N. HUTCHAMASTHY GOWDA.—MADAM, on behalf of the Chief Minister I beg to introduce the Mysore Public Service Commission (Conduct of Business and Additional Functions) (Second Amendment) Bill 1973.

MADAM SPEAKER.—The Bill is introduced**

**Copies appended as annexures to this Volume.